ಕರ್ನಾಟಕ ಸರ್ಕಾರ
**ಆಯುಷ್ ಇಲಾಖೆ**
ಜಿಲ್ಲಾ ಪಂಚಾಯತ್, ಹಾಸನ
**ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ-573201,**

ಇ-ಮೇಲ್ ವಿಳಾಸ: **dao.hassan09@gmail.com** ದೂರವಾಣಿ ಸಂ: 08172-272272

ಸಂ: ಜಿಆಕಹಾ/13/ನೇಮಕಾತಿ/2026-27 ದಿನಾಂಕ: 19-10-2026

**<u>ರಾಷ್ಟ್ರೀಯ ಆಯುಷ್ ಅಭಿಯಾನದಡಿ ಗುತ್ತಿಗೆ ನೇಮಕಾತಿ ಅಧಿಸೂಚನೆ</u>**

ವಿಷಯ:- ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನದಡಿ ತಾತ್ಕಾಲಿಕವಾಗಿ ಮಂಜೂರಾಗಿರುವ ತಜ್ಞ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿಗಳು ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:-
1. ಆಯುಷ್ ಇಲಾಖೆ ಪತ್ರ ಸಂ: AYUSH/66/NAM/2025-NAM-DIRECTORATE OF AYUSH, ದಿನಾಂಕ: 06-05-2026.
2. ಆಯುಷ್ ಇಲಾಖೆ ಪತ್ರ ಸಂ: AYUSH/66/NAM/2025-NAM-DIRECTORATE OF AYUSH, ದಿನಾಂಕ: 28-08-2026.
3. ಆಯುಷ್ ಇಲಾಖೆ ಪತ್ರ ಸಂ: ಆಯುಷ್/69/ನ್ಯಾಮ್/2021-22. ದಿನಾಂಕ: 17-01-2023.
4. ಆಯುಷ್ ಇಲಾಖೆ ಪತ್ರ ಸಂ: ಆಯುಷ್/273/ನ್ಯಾಮ್/2025-ನ್ಯಾಮ್. ದಿನಾಂಕ: 04-02-2026.
5. ಆಯುಷ್ ಇಲಾಖೆ ಸುತ್ತೋಲೆ ಸಂಖ್ಯೆ: ಆಯುಷ್/07/ಐಇಸಿ(3)2015-16 ದಿನಾಂಕ: 21-08-2019
6. ಈ ಕಛೇರಿ ನೇಮಕಾತಿ ಅಧಿಸೂಚನೆ ಸಂ: ಜಿಆಕಹಾ/ಸಿಎಸ್ಎಸ್/90/ನೇಮಕಾತಿ/2022-23 ದಿನಾಂಕ: 28-08-2024
7. ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯ ತಜ್ಞ ವೈದ್ಯರು/ಅರೆವೈದ್ಯಕೀಯ ಸಿಬ್ಬಂದಿಗಳು ಮತ್ತು ಸಮುದಾಯ ಆರೋಗ್ಯ ಅಧಿಕಾರಿಗಳ ನೇಮಕಾತಿ ಸಭೆಯ ನಡವಳಗಳ ದಿನಾಂಕ:24-09-2026.
8. ಜಿಲ್ಲಾಧಿಕಾರಿಗಳ ಕಛೇರಿ ಟಿಪ್ಪಣಿ ಕಂಡಿಕೆ (20) ರ ಅನುಮೋದನೆ ದಿ: 16-10-2026

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳನ್ವಯ ಈ ಹಿಂದೆ ಹೊರಡಿಸಿರುವ ಉಲ್ಲೇಖಿತ (06)ರ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆಯಲಾಗಿತ್ತು. ತದ ನಂತರ ಉಲ್ಲೇಖ(1) & (2) ರ ಆಯುಷ್ ನಿರ್ದೇಶನಾಲಯದ ಪತ್ರಗಳಲ್ಲಿ ಪುನಃ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಮೇಲ್ದರ್ಜೇಗೇರಿಸಿರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿಗಳನ್ನು ಮತ್ತು ಉಲ್ಲೇಖ(4)ರಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿನ ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಮಾರ್ಗಸೂಚಿಯನ್ವಯ ಖಾಲಿ ಇರುವ ಹುದ್ದೆಗಳಿಗೆ ಮೆರಿಟ್ ಅಧಾರದ ಮೇಲೆ ಮತ್ತು ಹೊಸ ಮೀಸಲಾತಿ ಆದೇಶದ ನಿಯಮಾವಳಿಗಳನ್ವಯ ಮೀಸಲಾತಿಯನ್ನು ಉಲ್ಲೇಖ(7) ರ ಜಿಲ್ಲಾ ಆಯುಷ್ ನೇಮಕಾತಿ ಸಭೆ ನಡವಳಿ ಅನ್ವಯ ನಿಗದಿಪಡಿಸಿದಂತೆ ಹಾಗೂ ವಿದ್ಯಾರ್ಹತೆ ಮತ್ತು ಇತರೆ ಷರತ್ತು ಮಾನದಂಡಗಳನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ದಿನಾಂಕ: 19-10-2026ರಿಂದ ವೆಬ್‌ಸೈಟ್ ವಿಳಾಸ https://hassan.nic.in ಮತ್ತು https://ayush.karnataka.gov.in/ ಇಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸ್ವಯಂ ದೃಡೀಕೃತ ದಾಖಲೆಗಳೊಂದಿಗೆ **ಸದಸ್ಯ ಕಾರ್ಯದರ್ಶಿಗಳು/ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹೊಸಲೈನ್ ರಸ್ತೆ, ಹಾಸನ** ಈ ವಿಳಾಸಕ್ಕೆ ದಿನಾಂಕ: 05-11-2026 ಸಂಜೆ-5.30 ಗಂಟೆಯ ವರೆಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಸೂಚಿಸಿದೆ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

| ಕ್ರ. ಸಂ | ಹುದ್ದೆಗಳ ಹೆಸರು | ಹುದ್ದೆಗಳು ಖಾಲಿ ಇರುವ ಸ್ಥಳ | ಸಂಖ್ಯೆ | ಮೀಸಲಾತಿ | ಸಮತಳ ಮೀಸಲಾತಿ | ಸಂಚಿತ ವೇತನ ಮಾಹೆಯಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|
| 1. | ತಜ್ಞ ವೈದ್ಯರು (ಯೋಗ ಮತ್ತು ಪ್ರಕೃತಿ ಚಿಕಿತ್ಸೆ) | ತಾಲ್ಲೂಕು ಹೋಮಿಯೋಪಥಿ ಆಸ್ಪತ್ರೆ, ಸಕಲೇಶಪುರ | 01 | ಪ. ಪಂ | ಸಾಮಾನ್ಯ | 52,550/- +5,000 (PG Allowance =57,550 | ಕನಿಷ್ಠ 03 ವರ್ಷಗಳ ಅನುಭವದೊಂದಿಗೆ BNYS, MS/MD ಸ್ನಾತ್ತಕೋತ್ತರ ಪದವಿಯನ್ನು ಹೊಂದಿರತ್ತಕ್ಕದು ಒಂದು ವೇಳೆ ಸ್ನಾತ್ತಕೋತ್ತರ ಪದವಿದರರು ಲಭ್ಯವಿಲ್ಲದಿದ್ದರೆ PG Allowance ರಹಿತವಾಗಿ BNYS ಸ್ನಾತ್ತಕ ಪದವಿಯನ್ನು ಪರಿಗಣಿಸುವುದು |
| 2. | ತಜ್ಞ ವೈದ್ಯರು ( ಆಯುರ್ವೇದ) | ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಹೋಮಿಯೋಪಥಿ ಆಸ್ಪತ್ರೆ, ಹಾಸನ | 01 | ಸಾಮಾನ್ಯ | ಮ. ಅ | | ಕನಿಷ್ಠ 03 ವರ್ಷಗಳ ಅನುಭವದೊಂದಿಗೆ BAMS, MS in Shalyatantra MD in Panchakarma / Kayachikista ವಿಷಯದಲ್ಲಿ ಸ್ನಾತ್ತಕೋತ್ತರ ಪದವಿಯನ್ನು ಹೊಂದಿರತ್ತಕ್ಕದು |
| 1. | ಔಷಧಿ ವಿತರಕರು | ಹಾಸನ ಚನ್ನರಾಯಪಟ್ಟಣ ಹೊಳೇನರಸೀಪುರ ಅರಸೀಕೆರೆ ಸಕಲೇಶಪುರ | 06 | ಪ.ಜಾ | ಸಾಮಾನ್ಯ | 27550/- | ಬಿ-ಫಾರ್ಮಾ ಜೊತೆಗೆ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. ಒಂದು ವೇಳೆ ಬಿ.ಫಾರ್ಮಾ ಅಭ್ಯರ್ಥಿಯು ದೊರೆಯದ ಪಕ್ಷದಲ್ಲಿ ಕನಿಷ್ಠ 02 ವರ್ಷ ಅನುಭವವಿರುವ ಡಿ-ಫಾರ್ಮಾ ಅಭ್ಯರ್ಥಿಗಳನ್ನು ಪರಿಗಣಿಸುವುದು. ಕಂಪ್ಯೂಟರ್ ಜ್ಞಾನ ಹೊಂದಿರಬೇಕು |
| | | | | ಪ. ಪಂ | ಸಾಮಾನ್ಯ | | |
| | | | | ಸಾಮಾನ್ಯ | ಮ. ಅ | | |
| | | | | ಸಾಮಾನ್ಯ | ಗ್ರಾ. ಅ | | |
| | | | | ಪ್ರ-2ಎ | ಸಾಮಾನ್ಯ | | |
| | | | | ಸಾಮಾನ್ಯ | ಅಂ. ಅ (ದೃಷ್ಠಿಮಾಂದ್ಯ) | | |
| 4. | ಮಸಾಜಿಸ್ಟ್ | ಅರಸೀಕೆರೆ ಸಕಲೇಶಪುರ | 02 | ಸಾಮಾನ್ಯ | ಸಾಮಾನ್ಯ | 18500/- | ಕನಿಷ್ಟ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಯುಷ್ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಟ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. |
| | | | | ಪ. ಪಂ | ಸಾಮಾನ್ಯ | | |
| 6. | ಸ್ತ್ರೀ ರೋಗ ಅಟೆಂಡೆಂಟ್ | ಹೊಳೇನರಸೀಪುರ | 01 | ಸಾಮಾನ್ಯ | ಸಾಮಾನ್ಯ | 18500/- | ಕನಿಷ್ಟ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಯುಷ್ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಟ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. |
| 7. | ಮಲ್ಟಿಪರ್ಪಸ್ ವರ್ಕರ್ | ಸಕಲೇಶಪುರ | 01 | ಪ. ಜಾ | ಸಾಮಾನ್ಯ | 16900/- | ಕನಿಷ್ಟ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಯುಷ್ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಟ 01 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. ಕಂಪ್ಯೂಟರ್ ಜ್ಞಾನ ಹೊಂದಿರಬೇಕು |
| 8. | ಸಮುದಾಯ ಆರೋಗ್ಯ ಅಧಿಕಾರಿಗಳು | ಆಯುಷ್ಮಾನ್ ಆರೋಗ್ಯ ಮಂದಿರಗಳು ಉದೇವಾರ ಜಿ.ಪುರ ಉದ್ದೂರು ಎಂ.ಶಿವರ ಕಲ್ಲುಂಡಿ ಕುರಾದಹಳ್ಳಿ ತೆರಣ್ಯ ದೋಣನಕಟ್ಟೆ ಮಾವನೂರು ಮುತ್ತತ್ತಿ ಲಕ್ಕೂರು ಹೆಬ್ಬಾಲೆ | 12 | ಪ. ಜಾ | ಸಾಮಾನ್ಯ | ಸಂಚಿತ ವೇತನ 25,000/- ಮತ್ತು ಕಾರ್ಯಕ್ಷಮ ಆಧಾರಿತ ಭತ್ಯೆ 15,000/- | ಆಯುರ್ವೇದ ವೈದ್ಯಕೀಯ ವಿಜ್ಞಾನದಲ್ಲಿ ಪದವಿ (BAMS Degree) |
| | | | | ಸಾಮಾನ್ಯ | ಸಾಮಾನ್ಯ | | |
| | | | | ಪ. ಪಂ | ಸಾಮಾನ್ಯ | | |
| | | | | ಸಾಮಾನ್ಯ | ಮ. ಅ | | |
| | | | | ಪ್ರ-1 | ಸಾಮಾನ್ಯ | | |
| | | | | ಸಾಮಾನ್ಯ | ಗ್ರಾ. ಅ | | |
| | | | | ಪ್ರ-2ಎ | ಸಾಮಾನ್ಯ | | |
| | | | | ಸಾಮಾನ್ಯ | ಅಂ. ಅ (ದೃಷ್ಠಿ ಮಾಂದ್ಯ) | | |
| | | | | ಪ. ಜಾ | ಮ. ಅ | | |
| | | | | ಸಾಮಾನ್ಯ | ಮ. ಅ | | |
| | | | | ಪ್ರ-2ಬಿ | ಸಾಮಾನ್ಯ | | |
| | | | | ಸಾಮಾನ್ಯ | ಗ್ರಾ. ಅ | | |

**ಮೀಸಲಾತಿ /ಸಮತಳ ಮೀಸಲಾತಿ ಸೂಚನೆ:-**

| | | | |
|---|---|---|---|
| ಪ. ಜಾ | ಪರಿಶಿಷ್ಟ ಜಾತಿ ಅಭ್ಯರ್ಥಿ. | ಸಾಮಾನ್ಯ | ಸಾಮಾನ್ಯ ಅಭ್ಯರ್ಥಿ |
| ಪ. ಪಂ | ಪರಿಶಿಷ್ಟ ಪಂಗಡ ಅಭ್ಯರ್ಥಿ | ಮ. ಅ | ಮಹಿಳಾ ಅಭ್ಯರ್ಥಿ |
| ಪ್ರ-1 | ಪ್ರವರ್ಗ-1 ಅಭ್ಯರ್ಥಿ | ಗ್ರಾ. ಅ | ಗ್ರಾಮೀಣ ಅಭ್ಯರ್ಥಿ |
| ಪ್ರ-2ಎ | ಪ್ರವರ್ಗ-2ಎ ಅಭ್ಯರ್ಥಿ | ಅಂ. ಅ | ಅಂಗವಿಕಲ ಅಭ್ಯರ್ಥಿ |
| ಪ್ರ-2ಬಿ | ಪ್ರವರ್ಗ-2ಬಿ ಅಭ್ಯರ್ಥಿ | | |
| ಸಾಮಾನ್ಯ | ಸಾಮಾನ್ಯ ಅಭ್ಯರ್ಥಿ | | |

**ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:**

1. **ವಯೋಮಿತಿ:**-ದಿನಾಂಕ:05-11-2026ರಂದು ಎಲ್ಲಾ ವರ್ಗದವರು ಕನಿಷ್ಠ 18 ವರ್ಷ ಪೂರ್ಣಗೊಂಡಿರತಕ್ಕದ್ದು ಹಾಗೂ ಸಿಆಸುಇ 262 ಸೇನೆನಿ 2025 ದಿನಾಂಕ 29.01.2026ರಲ್ಲಿ ಆದೇಶಿಸಿರುವಂತೆ ಒಂದು ಬಾರಿಗೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದ್ದು ಈ ಹಿನ್ನೆಲೆಯಲ್ಲಿ ಅದನ್ನು ಅಳವಡಿಸಿಕೊಂಡ ನಂತರ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಗರಿಷ್ಠ ವಯೋಮಿತಿ ನಿಗದಿಪಡಿಸಿದೆ.
    - ಪ.ಜಾತಿ, ಪ.ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಗೆ 45 ವರ್ಷ.
    - 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ 43 ವರ್ಷ
    - ಸಾಮಾನ್ಯ ಅಭ್ಯರ್ಥಿಗಳಿಗೆ 40 ವರ್ಷ
2. **ಜಾತಿ ಪ್ರಮಾಣ ಪತ್ರ:**-
    ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ
    ಬಿ) ಪ್ರವರ್ಗ -1 ರ ಅಭ್ಯರ್ಥಿಗಳು ನಮೂನೆ-ಇ
    ಸಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ-ಎಫ್
    ಮೇಲ್ಕಂಡ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
3. ಅಭ್ಯರ್ಥಿಗಳು ಅರ್ಜಿಯಲ್ಲಿ ಭರ್ತಿ ಮಾಡಿರುವ ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
4. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಲೇಬೇಕು. ನಿಗದಿಪಡಿಸಿದ ವಿದ್ಯಾರ್ಹತೆಗೆ ಪರೀಕ್ಷೆ ಬರೆದು ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
5. ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿಯಾಗುವ ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳು ಆಯುಷ್ಮಾನ್ ಆರೋಗ್ಯ ಮಂದಿರಗಳಿಗೆ ಖಾಯಂ ವೈದ್ಯಾಧಿಕಾರಿಗಳ ವರ್ಗಾವಣೆ ಅಥವಾ ನೇಮಕಾತಿಯಿಂದ ಭರ್ತಿಯಾಗುವವರೆಗೆ ಮಾತ್ರ ಚಾಲ್ತಿಯಲ್ಲಿರುತ್ತವೆ ಎಂಬ ಷರತ್ತಿಗೊಳಪಟ್ಟಿರುತ್ತದೆ.
6. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಗುತ್ತಿಗೆ ಆಧಾರದ ತಜ್ಞ ವೈದ್ಯರು ಮತ್ತು ಗುತ್ತಿಗೆ ಆಧಾರದ ಸಮುದಾಯ ಆರೋಗ್ಯ ಅಧಿಕಾರಿಗಳ ಹಾಗೂ ಗುತ್ತಿಗೆ ಆಧಾರದ ವಿವಿಧ ಅರೆವೈದ್ಯಕೀಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು
7. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
8. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಸದರಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
9. ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅರ್ಜಿಯ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ಅಭ್ಯರ್ಥಿಗಳು ಸಲ್ಲಿಸಿದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
10. **ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.**
11. **ಜನ್ಮ ದಿನಾಂಕ ದೃಢೀಕರಣ ಪತ್ರ:**- ಎಸ್.ಎಸ್.ಎಲ್.ಸಿ / ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರ.
12. **ಗ್ರಾಮೀಣಾ ಅಭ್ಯರ್ಥಿ ಮೀಸಲಾತಿ:**- 01 ರಿಂದ 10 ನೇ ತರಗತಿವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಮೇಲು ರುಜು ಮಾಡಿಸಿರುವ ಧೃಡೀಕೃತ ಪ್ರತಿ ಲಗತ್ತಿಸುವುದು.
13. **ಅಂಗವಿಕಲ ಅಭ್ಯರ್ಥಿ ಮೀಸಲಾತಿ:**- ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲೂಸಿಡಿ 111 ಪಿಹೆಚ್‌ಪಿ 2022, ದಿನಾಂಕ: 17.08.2022 ರಂತೆ ಶೇ. 40 ಕ್ಕಿಂತ ಕಡಿಮೆ ಇಲ್ಲದಂತಹ ನ್ಯೂನತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ/115/ಸೇನನಿ/2005, ದಿನಾಂಕ: 19-11-2005 ರಲ್ಲಿ

ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ/ UDID ಪ್ರಮಾಣ ಪತ್ರ ಪಡೆದಿರಬೇಕು.

14. ಆಯುಷ್ ನಿರ್ದೇಶನಾಲಯದ ಆದೇಶ ಸಂ: ಆಯುಷ್/52/ಐಇಸಿ(3)/2018-19, ದಿನಾಂಕ: 09-09-2020ರ ಅದೇಶದಲ್ಲಿ ಸೂಚಿಸಿರುವಂತೆ ನಿಗಧಿಪಡಿಸಿದ ಮೀಸಲಾತಿಯ/ ಸಮತಳ ಮೀಸಲಾತಿಯ ಅಭ್ಯರ್ಥಿಗಳು ದೊರೆಯದಿದ್ದ ಪಕ್ಷದಲ್ಲಿ ಈ ಹುದ್ದೆಗಳನ್ನು ನೇಮಕಾತಿ ಸಮಿತಿಯ ಅನುಮೋದನೆಯ ಷರತ್ತಿಗೊಳಪಟ್ಟು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಪರಿವರ್ತಿಸಿ ಭರ್ತಿ ಮಾಡಲು ಕ್ರಮವಹಿಸಲಾಗುವುದು.
15. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹುದ್ದೆಗಳಾಗಿದ್ದು ಇಲಾಖೆಯ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
16. ಸರ್ಕಾರಿ ಅಥವಾ ಕೆ.ಪಿ.ಎಂ.ಇ ನೊಂದಾಯಿತ ಖಾಸಗಿ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕಾರ್ಯನಿರ್ವಹಿಸಿದ ಧೃಢೀಕೃತ ಅನುಭವದ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು (ಕಡ್ಡಾಯವಾಗಿ ಕೆಪಿಎಂಇ ನೊಂದಣಿ ಸಂಖ್ಯೆಯನ್ನು ಒಳಗೊಂಡಿರತಕ್ಕದ್ದು).
17. ಜಿಲ್ಲಾ ಆಯುಷ್ ಸಮಿತಿಯ ನಡಾವಳಿಯಲ್ಲಿ ತೀರ್ಮಾನಿಸಿದಂತೆ ಹುದ್ದೆಗಳಿಗೆ ಅನುಗುಣವಾಗಿ ಹೊಂದಿರಬೇಕಾದ ಕಡ್ಡಾಯ ಅನುಭವವನ್ನು ಹೊರತು ಪಡಿಸಿ, ತದನಂತರ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಹೆಚ್ಚಿನ ಅನುಭವಕ್ಕೆ ಪ್ರತಿ ಮೂರು ತಿಂಗಳಿಗೆ 01 ಅಂಕದಂತೆ ವಾರ್ಷಿಕ 04 ಅಂಕಗಳನ್ನು ನಿಗದಿಪಡಿಸಲಾಗಿದೆ ಹಾಗೂ ಗರಿಷ್ಟ 20 ಅಂಕಗಳಿಗೆ ಸೀಮಿತಗೊಳಿಸಲಾಗಿದೆ.
18. ಜಿಲ್ಲಾ ಆಯುಷ್ ಸಮಿತಿಯ ನಡಾವಳಿಯಲ್ಲಿ ತೀರ್ಮಾನಿಸಿದಂತೆ ಸರ್ಕಾರಿ ಅಥವಾ ಕೆಪಿಎಂಇ ನೊಂದಾಯಿತ ಖಾಸಗಿ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಪ್ರಮಾಣ ಪತ್ರದ ಜೊತೆಗೆ ಅಂತಿಮವಾಗಿ ವೇತನ ಪಡೆದ ಮೂರು ತಿಂಗಳ ವೇತನ ಪ್ರಮಾಣ ಪತ್ರವನ್ನು ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರಿಂದ ಸಹಿ ಪಡೆದ ಧೃಢೀಕೃತ ಪ್ರತಿ ಸಲ್ಲಿಸುವುದು.
19. ಸಮುದಾಯ ಆರೋಗ್ಯ ಅಧಿಕಾರಿಗಳು, ಔಷಧಿ ವಿತರಕರು ಮತ್ತು ಮಸಾಜಿಸ್ಟ್ ಹುದ್ದೆಗಳು 01 ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ತದನಂತರ ಆಯ್ಕೆ ಸಮಿತಿಯಿಂದ ಸ್ಥಳ ನಿಯುಕ್ತಿಗೊಳಿಸಲಾಗುವುದು.
20. ಅಭ್ಯರ್ಥಿಗಳು ಒದಗಿಸಿದ ಯಾವುದೇ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಅಥವಾ ಪ್ರಕಟಣೆಯಲ್ಲಿ ತಿಳಿಸಲಾದ ಅರ್ಹತಾ ಮಾನದಂಡಗಳಿಗೆ ಅನುಗುಣವಾಗಿಲ್ಲದಿದ್ದಲ್ಲಿ ನೇಮಕಾತಿ ಯಾವುದೇ ಅಂತದಲ್ಲಿ ಮುಂದಿನ ಪ್ರಕ್ರಿಯೆಯಿಂದ ಕೈಬಿಡುವ ಅಥವಾ ನೇಮಕಾತಿ ಹೊಂದಿ ಕರ್ತವ್ಯಕ್ಕೆ ಸೇರಿದ ನಂತರವೂ ಆಯ್ಕೆಯಾದ ಅಭ್ಯರ್ಥಿಗಳನ್ನು ಬಿಡುಗಡೆಗೊಳಿಸುವ ಸಂಪೂರ್ಣ ಹಕ್ಕನ್ನು ಜಿಲ್ಲಾ ಆಯುಷ್ ಸಮಿತಿಯು ಹೊಂದಿರುತ್ತದೆ.
21. ಅರ್ಜಿಗಳನ್ನು ಸಲ್ಲಿಸಲು ಯಾವುದೇ ಅರ್ಜಿ ಶುಲ್ಕವಿರುವುದಿಲ್ಲ. ಅರ್ಜಿಗಳು ಮತ್ತು ಅಧಿಸೂಚನೆಯ ಮಾಹಿತಿಯನ್ನು ವೆಬ್‌ಸೈಟ್ ವಿಳಾಸ https://hassan.nic.in ಮತ್ತು https://ayush.karnataka.gov.in/ ಇಲ್ಲಿಂದ ಪಡೆಯುವುದು.

**ಆಯ್ಕೆ ಪ್ರಕ್ರಿಯೆ ಮಾರ್ಗಸೂಚಿಗಳು:**

1. ಸ್ವೀಕೃತವಾದ ಅರ್ಜಿಗಳನ್ನು ನಿಗದಿಪಡಿಸಿದ ಅರ್ಹತಾ ಮಾನದಂಡಗಳ ಆಧಾರದ ಮೇಲೆ ಪ್ರತ್ಯೇಕ ಹುದ್ದೆಗಳಿಗೆ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು (Shortlist) ಸಿದ್ಧ ಪಡಿಸಲಾಗುವುದು.

2. ಪ್ರತಿ ಹುದ್ದೆಯ ವರ್ಗಕ್ಕೆ ಪ್ರತ್ಯೇಕವಾಗಿ ಮೆರಿಟ್ ಮೆರಿಟ್ ಪಟ್ಟಿಯನ್ನು ಸಿದ್ದಪಡಿಸಲಾಗುವುದು. ಸದರಿ ಮೆರಿಟ್ ಪಟ್ಟಿಯಿಂದ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಈ ಕೆಳಕಂಡ ಅನುಪಾತದಲ್ಲಿ ಕರೆಯಲಾಗುವುದು.
   (ಅ) ನಿರ್ದಿಷ್ಟ ಹುದ್ದೆಗೆ 3 ಅಥವಾ ಅದಕ್ಕಿಂತ ಕಡಿಮೆ ಖಾಲಿ ಹುದ್ದೆಗಳಿದ್ದಲ್ಲಿ, ಪ್ರತಿ ಖಾಲಿ ಹುದ್ದೆಗೆ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.
   (ಆ) ನಿರ್ದಿಷ್ಟ ಹುದ್ದೆಗೆ 3ಕ್ಕಿಂತ ಹೆಚ್ಚು ಖಾಲಿ ಹುದ್ದೆಗಳಿದ್ದಲ್ಲಿ, ಪ್ರತಿ ಖಾಲಿ ಹುದ್ದೆಗೆ 1:3ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

3. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ರೋಸ್ಟರ್ ಮತ್ತು ಮೆರಿಟ್ ಹಾಗೂ ಅರ್ಹತೆ ಆಧಾರದ ಮೇಲೆ ತಾವುಗಳು ಪಡೆದಿರುವ ವಿದ್ಯಾರ್ಹತೆಯ ಪರೀಕ್ಷೆಯ ಅಂಕ, ಅನುಭವ ಮತ್ತು ಸಂದರ್ಶನಕ್ಕೆ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಗುತ್ತಿಗೆ ನೌಕರರ ನೇಮಕಾತಿ ಮಾಡಿಕೊಳ್ಳುವ ನೇಮಕಾತಿ ಮಾರ್ಗಸೂಚಿ ಸಂಖ್ಯೆ: ಆಯುಷ್/07/ಐಇಸಿ(3)/2015-16 ದಿ: 21-08-2019 ಅನ್ವಯ ಅನುಪಾತ 70:20:10 ರಂತೆ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.

4. ಒಟ್ಟು ಗರಿಷ್ಠ 100 ಅಂಕಗಳಲ್ಲಿ ಅಭ್ಯಥಿಗಳಿಗೆ ಕೆಳಕಂಡಂತೆ ಅಂಕಗಳನ್ನು ನಿಗದಿಪಡಿಸಲಾಗುವುದು.
   - ಪದವಿಯಲ್ಲಿ/ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಶೇ. 70ರಷ್ಟು ತೂಕವನ್ನು (ಗರಿಷ್ಠ 70 ಅಂಕಗಳು) ನೀಡಲಾಗುವುದು.
   - ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಪಡೆದ ಕಾರ್ಯಾನುಭವಕ್ಕೆ ಶೇ. 20ರಷ್ಟು ತೂಕವನ್ನು (ಗರಿಷ್ಟ 20 ಅಂಕಗಳು) ನೀಡಲಾಗುವುದು.

➢ ವೈಯಕ್ತಿಕ ಸಂದರ್ಶನಕ್ಕೆ ಶೇ. 10ರಷ್ಟು ತೂಕವನ್ನು (ಗರಿಷ್ಟ 10 ಅಂಕಗಳು) ನೀಡಲಾಗುವುದು.

5. ನೇಮಕಾತಿ ಸಭಾ ನಡಾವಳಿಯಲ್ಲಿ ತೀರ್ಮಾನಿಸಿದಂತೆ ಅಭ್ಯರ್ಥಿಗಳು ಕಡ್ಡಾಯವಾಗಿ ಅರ್ಜಿ ಸಲ್ಲಿಸುವ ಹುದ್ದೆಗೆ ಅನುಗುಣವಾಗಿ ಕೆಪಿಎಂಇ ನೊಂದಾಯಿತ ಆಸ್ಪತ್ರೆ/ಚಿಕಿತ್ಸಾಲಯಗಳಿಂದ ಕನಿಷ್ಠ ಅನುಭವವನ್ನು ಪಡೆದಿರತಕ್ಕದ್ದು. ತಾವು ಕರ್ತವ್ಯ ನಿರ್ವಹಿಸಿದ ಸಂಸ್ಥೆಯ ಮುಖ್ಯಸ್ಥರಿಂದ ವೇತನ ಪಡೆದ ಬಗ್ಗೆ ಪಡೆದ ಕೊನೆಯ 03 ತಿಂಗಳ ವೇತನ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸುವುದು. ಕೆಪಿಎಂಇ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವಕ್ಕೆ ಪ್ರತಿ ಮೂರು ತಿಂಗಳಿಗೆ 01 ಅಂಕದಂತೆ ವಾರ್ಷಿಕ 04 ಅಂಕಗಳನ್ನು ನಿಡಲಾಗುವುದು ಹಾಗೂ ಗರಿಷ್ಟ 20 ಅಂಕಗಳಿಗೆ ಮೀರದಂತೆ ಸೀಮಿತಗೊಳಸಲಾಗುವುದು ಮತ್ತು ಹುದ್ದೆಗಳಿಗೆ ಅನುಸಾರವಾಗಿ ಕಡ್ಡಾಯವಾಗಿ ಪಡೆದಿರಬೇಕಾದ ಕನಿಷ್ಠ ಅನುಭವಕ್ಕೆ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.

6. ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳನ್ನು ವೈಯಕ್ತಿಕ ಸಂದರ್ಶನಕ್ಕೆ ಹಾಜರಾಗಲು ಕರೆಯಲಾಗುವುದು.

7. ಆಯುಷ್ ಇಲಾಖೆಯ ಸುತ್ತೋಲೆಯಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದ ಅಡಿಯಲ್ಲಿ ಗುತ್ತಿಗೆ ನೇಮಕಾತಿ ಮಾಡಿಕೊಳ್ಳುವ ಕುರಿತು ನೀಡಲಾದ ನೇಮಕಾತಿ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು.

**ಗುತ್ತಿಗೆ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಗುತ್ತಿಗೆ ಆಧಾರದ ಮೇಲೆ ಮಾಡುವ ನೇಮಕಾತಿಯು ಸಂಪೂರ್ಣ ತಾತ್ಕಾಲಿಕ ಹಾಗೂ ಆರ್ಥಿಕ ವರ್ಷದ ಅಂತ್ಯದವರೆಗೆ ಅಂದರೆ ದಿ:31-03-2027 ಕ್ಕೆ ಕೊನೆಗೊಳ್ಳುತ್ತದೆ ಅಥವಾ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ. ಮುಂದುವರೆದು ಆರ್ಥಿಕ ವರ್ಷ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ (Break) ನೀಡಿ ತರುವಾಯ ಮುಂದಿನ ಆರ್ಥಿಕ ವರ್ಷದ ಕೊನೆಯ ದಿನಾಂಕದವರೆಗೆ ಮುಂದುವರೆಸುವ ಬಗ್ಗೆ ಆಯುಷ್ ಇಲಾಖೆಯ ಆದೇಶಾನುಸಾರ ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯ ಅನುಮೋದನೆ ಪಡೆದು ಗುತ್ತಿಗೆ ಸೇವೆಯನ್ನು ಮುಂದುವರೆಸಲು ಕ್ರಮ ವಹಿಸಲಾಗುವುದು.
2. ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯು ಆಯ್ಕೆಯಾದ ಸಿಬ್ಬಂದಿಯು ಪದೇ ಪದೇ ಕರ್ತವ್ಯಕ್ಕೆ ಗೈರು ಹಾಜರಾಗುವುದು ಹಾಗೂ ಸಾರ್ವಜನಿಕರಿಂದ ಏನಾದರೂ ದೂರುಗಳು ಬಂದಲ್ಲಿ ಯಾವುದೇ ನೋಟೀಸ್ ನೀಡದೇ ಕೆಲಸದಿಂದ ವಜಾ ಮಾಡಲಾಗುವುದು.
3. ಜಿಲ್ಲಾ ಆಯುಷ್ ನೇಮಕಾತಿ ಸಮಿತಿಯು ಶಿಸ್ತುಕ್ರಮದಡಿ ವಜಾಮಾಡಲಾದ ಸಿಬ್ಬಂದಿಗಳನ್ನು ಮುಂದಿನ ಯಾವುದೇ ನೇಮಕಾತಿಗಳಲ್ಲಿ ಪರಿಗಣಿಸುವುದಿಲ್ಲ.
4. ಕೇಂದ್ರ ಸ್ಥಾನದಲ್ಲಿ ತಂಗಿದ್ದು 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು.
5. ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಕಾಲಕಾಲಕ್ಕೆ ನಿಗದಿಪಡಿಸಿದ ಸಂಚಿತ ಮೊತ್ತವನ್ನು ಮಾತ್ರ ಪಡೆಯುವುದು
6. ನೇಮಕಾತಿಗೊಂಡ ತಜ್ಞ ವೈದ್ಯರು ಹಾಗೂ ಸಿಬ್ಬಂದಿಗಳು ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ನೇಮಕಗೊಂಡ ಆಸ್ಪತ್ರೆಗಳ ವೈದ್ಯಾಧಿಕಾರಿಗಳ ಸೂಚನೆ ಅನುಸಾರ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.
7. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಅಥವಾ ಸರ್ಕಾರ ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಪರ್ಯವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.
    - **ಅಭ್ಯರ್ಥಿಗಳು ಗುತ್ತಿಗೆ ಒಪ್ಪಂದ ಮುಕ್ತಾಯಕ್ಕೆ ಕೋರುವ ಬಗ್ಗೆ:** ಅಭ್ಯರ್ಥಿಗಳು ಆಡಳಿತ ವೈದ್ಯಾಧಿಕಾರಿಗಳಿಗೆ ಒಂದು ತಿಂಗಳ ಮುಂಚಿತವಾಗಿ ಮನವಿಯನ್ನು ಸಲ್ಲಿಸಬೇಕು ಮತ್ತು ಅದರ ಬಗ್ಗೆ ಜಿಲ್ಲಾ ಆಯುಷ್ ನೇಮಕಾತಿ ಸಮಿತಿ ಹಾಗೂ ಆಯುಷ್ ನಿರ್ದೇಶನಾಲಯಕ್ಕೆ ಮಾಹಿತಿ ನೀಡಬೇಕು.
    - **ಜಿಲ್ಲಾ ಆಯುಷ್ ಸಮಿತಿ/ ನಿರ್ದೇಶನಾಲಯದಿಂದ ಗುತ್ತಿಗೆ ಒಪ್ಪಂದ ಮುಕ್ತಾಯದ ಬಗ್ಗೆ:**
      ಅ. ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಜಿಲ್ಲಾ ಆಯುಷ್ ಸಮಿತಿ ಯಾವುದೇ ಕಾರಣ ನೀಡದೆ ಒಂದು ತಿಂಗಳ ನೋಟಿಸ್ ನೀಡಿ ಯಾವುದೇ ಸಮಯದಲ್ಲಿ ಗುತ್ತಿಗೆ ಒಪ್ಪಂದವನ್ನು ರದ್ದುಗೊಳಿಸಬಹುದು.
      ಆ. ಒಪ್ಪಂದ ಉಲ್ಲಂಘನೆ ಅಥವಾ ಶಿಸ್ತು ಕ್ರಮದ ಆಧಾರದ ಮೇಲೆ ಕ್ರಮ ಕೈಗೊಂಡಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಒಪ್ಪಂದ ಮುಕ್ತಾಯಗೊಳಿಸಲಾಗುವುದು.
    - ಜಿಲ್ಲಾ ಆಯುಷ್ ಸಮಿತಿಯು ಶಿಸ್ತು ಕ್ರಮದ ಆಧಾರದ ಮೇಲೆ ಗುತ್ತಿಗೆ ಸೇವೆಯಿಂದ ವಜಾಗೊಂಡ ಅಭ್ಯರ್ಥಿಗಳನ್ನು ಜಿಲ್ಲಾ ಆಯುಷ್ ಸಮಿತಿಯಿಂದ ನಡೆಸುವ ಮುಂದಿನ ಯಾವುದೇ ನೇಮಕಾತಿಗಳಲ್ಲಿ ಪರಿಗಣಿಸುವುದಿಲ್ಲ.

8. ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿಕೊಡುವ ಷರತ್ತಿಗೊಳಪಟ್ಟು ನೇಮಕಾತಿ ಮಾಡಲಾಗುವುದು.
9. ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಹಾಗೂ ಸಂಭಾವನೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ ಅಥವಾ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.
10. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಆಸ್ಪತ್ರೆಗಾಗಲೀ ಅಥವಾ ಜಾಗಕ್ಕಾಗಲೀ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಹಕ್ಕಿರುವುದಿಲ್ಲ.
11. ಈ ನೇಮಕಾತಿಯಲ್ಲಿ ಹೆಸರು ಹೊಂದಿದ ಮಾತ್ರಕ್ಕೆ ಹುದ್ದೆಯ ಮೇಲೆ ಸಂಪೂರ್ಣ ಹಕ್ಕು ಹೊಂದಿರುವೆನೆಂದು ಭಾವಿಸತಕ್ಕದಲ್ಲ.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆಯುಷ್ ಸಮಿತಿ ಮತ್ತು
ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ